ಇ) ಸಕಲೇಶಪುರ, ಬೇಲೂರು, ಅರಸೀಕೆರೆ, ಸೇರಿ ಒಬ್ಬ ಡಿ.ವೈ.ಎಸ್.ಪಿ. ಇದ್ದಾರೆ. ಇದನ್ನು ವಿಂಗಡಿಸಿ ಸಕಲೇಶಪುರ, ಬೇಲೂರು ಜೊತೆಗೆ ಆಲೂರು ಸೇರಿಸಿ ಒಬ್ಬ ಡಿ.ವೈ.ಎಸ್.ಪಿ. ಮಾಡಬೇಕೆಂಬ ಮನವಿ ಬಂದಿಲ್ಲವೇ?

ಈ) ಈ ಪ್ರದೇಶಗಳು ಮಲೆನಾಡು ಪ್ರದೇಶವಾಗಿದ್ದು ಮತ್ತು ವಿಶಾಲ ಪ್ರದೇಶವಾದ್ದರಿಂದ ಸಕಲೇಶಪುರ ಹತ್ತಿರವಾಗುವುದರಿಂದ ಒಬ್ಬ ಡಿ.ವೈ.ಎಸ್.ಪಿ. ಇಲ್ಲಿಗೆ ತುಂಬಾ ಆಗತ್ಯವಿದೆ ಎಂದು ಮನವಿ ಬಂದಿಲ್ಲವೇ? ಹಾಗಿದ್ದಲ್ಲಿ ಸರ್ಕಾರದವರು ಯಾವಾಗ ಈ ವಿಂಗಡನೆ ಮಾಡಿ ಡಿ.ವೈ.ಎಸ್.ಪಿ ಒಬ್ಬರನ್ನು ಈ ಭಾಗಕ್ಕೆ ನೇಮಿಸಲಿದ್ದಾರೆ?

ಶ್ರೀ ಧರ್ಮಸಿಂಗ್, ಗೃಹ ಸಚಿವರು

ಅ) ಹೌದು

ಆ) ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೌದ

ಈ) ಹೌದು

ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಅಗ್ನಿಶಾಮಕ ದಳದ ಬಗ್ಗೆ.

1362 – ಶ್ರೀ ಕೆ.ಪಿ.ಪ್ರಭು ಕುಮಾರ್ (ಅರಸೀಕೆರೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಸೀಕೆರೆ ನಗರಕ್ಕೆ ಅಗ್ನಿಶಾಮಕ ದಳದ ಆಗತ್ಯವಿದ್ದು ಅದರ ಸ್ಥಾಪನೆಯ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಹಾಗಾದರೆ ಅದನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಇ) ಇದಕ್ಕೆ ಪ್ರಾರಂಭದಲ್ಲಿ ' ತಗಲುವ ವೆಚ್ಚ ಎಷ್ಟು?

ಈ) ಬೇಕಾದ ಸಿಬ್ಬಂದಿ ಸಂಖ್ಯೆ : ಹಾಗೂ ವಾಹನಗಳ ಸಂಖ್ಯೆ ಎಷ್ಟು? (ಪ್ರತ್ಯೇಕವಾಗಿ ತಿಳಿಸುವುದು)

ಶ್ರೀ ಧರ್ಮಸಿಂಗ್, ಗೃಹಸಚಿವರು

ಅ) 1991-92 ನೇ ಆರ್ಥಿಕ ಸಾಲಿನಲ್ಲಿ ಅರಸೀಕೆರೆಯಲ್ಲಿ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) 1991-92ನೇ ಆರ್ಥಿಕ ಸಾಲಿನಲ್ಲಿ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲಾಗುವುದು.

ಇ) ರೂ.78,68,856-00

ಈ) ಒಟ್ಟು ಸಿಬ್ಬಂದಿ ಸಂಖ್ಯೆ : 52

ಜಲವಾಹನ ಸಂಖ್ಯೆ : 2

ವೇದಾವತಿ ನದಿಯ ಬಗ್ಗೆ.

1377 – ಶ್ರೀ ಇ.ವಿ.ವಿಜಯಕುಮಾರ್ (ಹೊಸದುರ್ಗ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೇದಾವತಿ ನದಿಯಲ್ಲಿ ನೀರು ಪೂರ್ಣವಾಗಿ ಬತ್ತಿ ಹೋಗಿರುವುದರಿಂದ ಉಂಟಾಗಿರುವ ಗಂಭೀರ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೆ:

ಅ) ಹಾಗಿದ್ದರೆ, ಈ ಭಾಗದ ಲಿಫ್ಟ್ ಇರಿಗೇಷನ್ ಸೌಲಭ್ಯ ಹೊಂದಿರುವ ರೈತರಿಗೆ ಉಂಟಾಗಿರುವ ತೊಂದರೆಗೆ ಸರ್ಕಾರವು ಬದಲಿ ವ್ಯವಸ್ಥೆ ಮಾಡಲು ಸಾಧ್ಯವೇ?

ಇ) ಹಾಗಿದ್ದರೆ, ವೇದಾವತಿ ನದಿಗೆ ಭದ್ರಾಚಾನಲ್ ನಿಂದ ನೀರು ಹರಿಸಲು ಸರ್ಕಾರವು ಕ್ರಮ ಜರುಗಿಸುವುದೇ?

ಶ್ರೀಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ, ಸಣ್ಣ ನೀರಾವರಿ ರಾಜ್ಯ ಸಚಿವರು

ಅ) ಹೌದು

ಆ) ಇಲ್ಲ

ಇ) ಇಂತಹ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಅಗ್ನಿಶಾಮಕ ದಳಗಳ ಬಗ್ಗೆ

1376 – ಶ್ರೀ ಇ.ವಿ. ವಿಜಯಕುಮಾರ್ (ಹೊಸದುರ್ಗ) : ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಅಗ್ನಿಶಾಮಕ ದಳದ ಘಟಕಗಳನ್ನು ಸ್ಥಾಪಿಸಲಾಗಿದೆ. (ಜಿಲ್ಲಾವಾರು ವಿವರಗಳೊನ್ನದಗಿಸುವುದು)

ಆ) ಈ ವ್ಯವಸ್ಥೆಗಾಗಿ ರಾಜ್ಯ ಸರ್ಕಾರವು ಪ್ರತಿ ವರ್ಷ ವೆಚ್ಚ ಮಾಡುತ್ತಿರುವ ಹಣವೆಷ್ಟು?

ಇ) ಹೊಸದಾಗಿ ಸದರಿ ಘಟಕಗಳನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಈ) ಹಾಗಿದ್ದರೆ ಪ್ರತಿ ತಾಲ್ಲೂಕು ಕೇಂದ್ರಗಳಿಗೆ ಒಂದು ಅಗ್ನಿಶಾಮಕ ಯಂತ್ರಗಳನ್ನು ಸರಬರಾಜು ಮಾಡಲು ಸಾಧ್ಯವೇ?

ಉ) ಹಾಗಿದ್ದರೆ ಬೇಸಿಗೆ ಪ್ರಯುಕ್ತ ಹೊಸದುರ್ಗಕ್ಕೆ ತಾತ್ಕಾಲಿಕವಾಗಿ ಒಂದು ಅಗ್ನಿಶಾಮಕ ಯಂತ್ರ ಕಳುಹಿಸಲು ಸಾಧ್ಯವೇ?

ಶ್ರೀ ಧರ್ಮಸಿಂಗ್, ಗೃಹ ಸಚಿವರು

ಅ) ರಾಜ್ಯದಲ್ಲಿ 37 ಅಗ್ನಿಶಾಮಕ ಠಾಣೆಗಳಿವೆ. ಜಿಲ್ಲಾವಾರು ವಿವರಣೆ ಈ ಕೆಳಕಂಡಂತೆ ಇದೆ.

1) ಬೆಂಗಳೂರು	11	10) ಗುಲ್ಬರ್ಗಾ	1
2) ಬಳ್ಳಾರಿ	3	11) ಹಾಸನ	1
3) ಬೆಳಗಾಂ	1	12) ಕೋಲಾರ	1
4) ಬೀದರ್	1	13) ಮಡಕೇರಿ	1
5) ಬಿಜಾಪುರ	2	14) ಮಂಡ್ಯ	1
6) ಚಿಕ್ಕಮಗಳೂರು	1	15) ಮೈಸೂರು	2
6) ಚಿತ್ರದುರ್ಗ	2	16) ರಾಯಚೂರು	2
8) ದಕ್ಷಿಣಕನ್ನಡ	2	17) ಶಿವಮೊಗ್ಗ	1
9) ಧಾರವಾಡ	3	18) ತುಮಕೂರು	1

ಆ) ರೂ.30,93,789-00ಗಳು

ಇ) ಇದೆ

ಈ) ಆರ್ಥಿಕ ಪರಿಸ್ಥಿತಿ ಮತ್ತು ಅಧ್ಯತೆ ಅನುಸರಿಸಿ ರಾಜ್ಯದ ವಿವಿಧ ಕೇಂದ್ರಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ತೆರೆಯುವ ಬಗ್ಗೆ ಹಂತ ಹಂತವಾಗಿ ಸರ್ಕಾರವು ಪರಿಶೀಲಿಸಲಾಗುವುದು.